# ಅಪರೂಪದ ಬೋಗನ್‌ವಿಲಿಯ

ಬೋಗನ್‌ವಿಲಿಯದ ಪತ್ರ ಪುಷ್ಪಗಳು ಸಾಧಾರಣವಾಗಿ ಪ್ರತ್ಯೇಕವಾದ ನೀಳ ಹಾಗೂ ಸಪೂರ ರೆಂಬೆಗಳಲ್ಲಿ ಬಿಡಿಬಿಡಿಯಾಗಿ ಬೆಳೆಯುತ್ತವೆ. ಜಿಗಣಿ ಬಳಿಯ ಬಾಲಾರ ಬಂಡೆ ಪ್ರಾಥಮಿಕ ಶಾಲೆಯಲ್ಲಿ ಬೆಳೆದಿದ್ದ ಬೋಗನ್‌ವಿಲಿಯ ಇದಕ್ಕಿಂತ ವಿಭಿನ್ನವಾಗಿದ್ದು ವಿಸ್ಮಯಗೊಳಿಸಿತು. ದಪ್ಪ ಕಾಂಡದ ಕಿರು ಮರದಲ್ಲಿ ಎಲೆ ಮತ್ತು ಹೂಗಳು ದಟ್ಟವಾಗಿ ದಂಡೆಯಂತೆ ಹೆಣೆದುಕೊಂಡು ಬಾಟಲ್ ಬ್ರಷ್‌ಗಳನ್ನು ಹೋಲುತ್ತಿದ್ದವು.

**- ಮಂಜುನಾಥ ಡಿ.ಎಸ್., ಬೆಂಗಳೂರು**





# ಕಿತ್ತಳೆ ಹಣ್ಣಿನ ಗಣಪ

ಈತ ಮಣ್ಣಿನ ಗಣಪನಲ್ಲ.. ಆದರೆ ಹಣ್ಣಿನ ಗಣಪ! ಗಣಪತಿಗೆ ಕಡುಬು–ಕಜ್ಜಾಯಗಳ ಜೊತೆ ಹಣ್ಣುಗಳ ನೈವೇದ್ಯ ಮಾಡುವುದನ್ನು ನೋಡಿದ್ದೇವೆ. ಆದರೆ ಇಲ್ಲಿ ನೋಡಿ, ನಮ್ಮ ಗಣನಾಯಕನೇ ಕಿತ್ತಳೆ ಹಣ್ಣುಗಳಿಂದ ತಯಾರಾಗಿ ಕುಳಿತುಬಿಟ್ಟಿದ್ದಾನೆ..!

ಇತ್ತೀಚೆಗೆ ನಡೆದ 'ನಮ್ಮೂರ ಶಿರಸಿ ಉತ್ಸವ'ದಲ್ಲಿ ಸ್ವಾಗತ ದ್ವಾರದ ಬಳಿ ಕಿತ್ತಳೆ ಹಣ್ಣುಗಳಿಂದ ಸುಂದರವಾಗಿ ನಿರ್ಮಿಸಲ್ಪಟ್ಟ ಗಣಪತಿಯ ಮೂರ್ತಿ ಎಲ್ಲರ ಕಣ್ಮನ ಸೆಳೆಯಿತು.

**-ಅನು ಬೊಮ್ನಳ್ಳಿ, ಶಿರಸಿ**

# ಪಾಂಚಜನ್ಯ

ಅಷ್ಟ ಮಠಗಳಿಂದಾವೃತ ಉಡುಪಿಯ ಶ್ರೀಕೃಷ್ಣ ದೇವಾಲಯ ಆಯೋಜಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಕೇಂದ್ರ ಸ್ಥಳ ರಾಜಾಂಗಣ. ಈ ಸಭಾ ಭವನದಲ್ಲಿ ಹೆಚ್ಚು ಕಮ್ಮಿ ವರ್ಷದ ಎಲ್ಲಾ ದಿನಗಳಲ್ಲಿ ಜರುಗುವ ಕಾರ್ಯಕ್ರಮ ನೋಡಲು ಬರುವ ಭಕ್ತಾದಿಗಳನ್ನು ರಾಜಾಂಗಣದ ದ್ವಾರದಲ್ಲಿರುವ ಬೃಹತ್ ಪಾಂಚಜನ್ಯ ಆಕರ್ಷಿಸುತ್ತದೆ. ಶ್ರೀಕೃಷ್ಣನಿಗೆ ಕೊಳಲು ಮತ್ತು ನವಿಲುಗರಿಯಷ್ಟೇ ಪ್ರೀತಿಯ ವಸ್ತು ಪಾಂಚಜನ್ಯ. ಶಂಖಾಕೃತಿಯನ್ನು ಅದಮಾರು ಮಠದವರ 16ನೆಯ ಪರ್ಯಾಯ ಸಂದರ್ಭದಲ್ಲಿ ಸಿಮೆಂಟ್ ಬಳಸಿ ರಚಿಸಲಾಯಿತು.

**-ಜೀವನ್ ಶೆಟ್ಟಿ, ಉಡುಪಿ**

